VOLUME: 16 | 18 JUNE 2026 | ಗುರುವಾರ | RS: 2 | PAGE: 06 ISSUE: 128 ಇ-ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

ಅನೇಕ ವರ್ಷಗಳಿಂದ ಸ್ಯಾಂಡಲ್‌ವುಡ್‌ನಲ್ಲಿ ತನ್ನದೇ ಛಾಪು ಮೂಡಿಸಿರುವ ನಟಿ ಶರ್ಮಿಳಾ ಮಾಂಡ್ರೆಗೆ ಇದೀಗ ಕಂಕಣ ಬಲ ಕೂಡಿಬಂದಿದೆ. ಮದುವೆ ನಿಶ್ಚಯವಾಗಿದ್ದು, ಇದೇ ಜೂನ್ 25 ರಂದೇ ನಿಶ್ಚಿತಾರ್ಥ ನಡೆಯಲಿದೆ. ನಟಿ ಶರ್ಮಿಳಾ ಮಾಂಡ್ರೆ ಅವರು ಜೀವನ ಸಂಗಾತಿಯನ್ನಾಗಿ ಚಿತ್ರೋದ್ಯಮಿಯನ್ನೇ ಆಯ್ಕೆ ಮಾಡಿಕೊಂಡಿರುವುದು ವಿಶೇಷ.



BHARATHA SARATHI
KANNADA DAILY NEWS PAPER
CALL 9740160669
# ಭಾರತ ಸಾರಥಿ
RNI KARKAN2011/44806
ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ
prabhavaa.com



ಸಂಪಾದಕ
ಗಂಡಸಿ ಸದಾನಂದಸ್ವಾಮಿ



## ಭಟ್ಕಳದಲ್ಲಿ ಮತ್ತೆ ಉದ್ವಿಗ್ನತೆ

ಕಾರವಾರ: ಇತ್ತೀಚಿನ ದಿನಗಳಲ್ಲಿ ಶಾಂತವಾಗಿದ್ದ ಭಟ್ಕಳ ನಗರದಲ್ಲಿ ಮತ್ತೆ ಕೋಮು ಸಂಘರ್ಷದ ಕಿಡಿ ಹೊತ್ತಿಕೊಂಡಿದೆ. ಹಿಂದೂ ಯುವತಿಯೊಂದಿಗೆ ಕಾರಿನಲ್ಲಿ ಹೋಗುತ್ತಿದ್ದ ಮುಸ್ಲಿಂ ಯುವಕನನ್ನು ಪ್ರಶ್ನಿಸಿ, ಪೊಲೀಸರಿಗೆ ಒಪ್ಪಿಸಿದ್ದ ಹಿಂದೂ ಮುಖಂಡರ ಮೇಲೆಯೇ ಪ್ರಕರಣ ದಾಖಲಾಗಿರುವುದನ್ನು ಖಂಡಿಸಿ ನೂರಾರು ಹಿಂದೂ ಕಾರ್ಯಕರ್ತರು ಭಟ್ಕಳ ಶಹರ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ತಡರಾತ್ರಿ ಭಾರಿ ಪ್ರತಿಭಟನೆ ನಡೆಸಿದ್ದಾರೆ.

ಮುಸ್ಲಿಂ ಯುವಕನೊಬ್ಬ ಹಿಂದೂ ಯುವತಿಯನ್ನು ತನ್ನ ಕಾರಿನಲ್ಲಿ ಕರೆದೊಯ್ಯುತ್ತಿದ್ದ. ಈ ವೇಳೆ ಅನುಮಾನಗೊಂಡ ಹಿಂದೂ ಮುಖಂಡರು ಮತ್ತು ಕಾರ್ಯಕರ್ತರು ಕಾರನ್ನು ಅಡ್ಡಗಟ್ಟಿ ಪ್ರಶ್ನಿಸಿದ್ದಾರೆ. "ನೀವಿಬ್ಬರೂ ಎಲ್ಲಿಗೆ ಹೋಗುತ್ತಿದ್ದೀರಾ? ಭಟ್ಕಳದಿಂದ ಸಾಗರದ ಕಾಡಿನ ಕಡೆಗೆ ನಿಮಗೆ ಏನು ಕೆಲಸ?" ಎಂದು ಮುಖಂಡರು ಸರಣಿ ಪ್ರಶ್ನೆಗಳನ್ನು ಕೇಳಿದ್ದಾರೆ.

ಹಿಂದೂ ಮುಖಂಡರ ಪ್ರಶ್ನೆಗೆ ಕಾರಿನಲ್ಲಿದ್ದವರಿಂದ ಸೂಕ್ತ ಮತ್ತು ಸರಿಯಾದ ಉತ್ತರ ಬಾರದ ಹಿನ್ನೆಲೆಯಲ್ಲಿ, ವಿಷಯ ಗಂಭೀರವೆಂದು ಪರಿಗಣಿಸಿದ ಮುಖಂಡರು ಇಬ್ಬರನ್ನೂ ಭಟ್ಕಳ ಶಹರ ಪೊಲೀಸ್ ಠಾಣೆಗೆ ಕರೆತಂದು ಬುದ್ಧಿ ಹೇಳುವಂತೆ ಪೊಲೀಸರ ವಶಕ್ಕೆ ಒಪ್ಪಿಸಿದ್ದರು.

ಯುವಕ ಮತ್ತು ಯುವತಿಯನ್ನು ಠಾಣೆಗೆ ಒಪ್ಪಿಸಿದ ಹಿಂದೂ ಮುಖಂಡರ ವಿರುದ್ಧವೇ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈ ವಿಷಯ ತಿಳಿಯುತ್ತಿದ್ದಂತೆ ತೀವ್ರ ಆಕ್ರೋಶಗೊಂಡ ಹಿಂದೂ ಮುಖಂಡರು ಹಾಗೂ ನೂರಾರು ಕಾರ್ಯಕರ್ತರು ಭಟ್ಕಳ ಶಹರ ಪೊಲೀಸ್ ಠಾಣೆಯ ಮುಂದೆ ಜಮಾಯಿಸಿದರು.

ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣವನ್ನು ತಕ್ಷಣವೇ ಹಿಂಪಡೆಯಬೇಕು ಮತ್ತು ಯುವಕನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ನೂರಾರು ಕಾರ್ಯಕರ್ತರು ಠಾಣೆಗೆ ಮುತ್ತಿಗೆ ಹಾಕಿ ಸರ್ಕಾರದ ಹಾಗೂ ಪೊಲೀಸರ ವಿರುದ್ಧ ಘೋಷಣೆಗಳನ್ನು ಕೂಗಿದರು. ಮುಖಂಡರ ಮೇಲಿನ ಕೇಸ್‌ನಿಂದಾಗಿ ಭಟ್ಕಳದಲ್ಲಿ ಸದ್ಯ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದ್ದು, ಮುಂಜಾಗ್ರತಾ ಕ್ರಮವಾಗಿ ಠಾಣೆಯ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದೆ.

## ಕೆಆರ್‌ಎಸ್‌ನಲ್ಲಿ ನೀರಿನಮಟ್ಟ ಕುಸಿತ

ಮಂಡ್ಯ: ಈ ಬಾರಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಆರಂಭದಲ್ಲೇ ಮುಂಗಾರು ಮಳೆ ಸಂಪೂರ್ಣ ಕೈಕೊಟ್ಟಿದೆ. ಇದರ ಬೆನ್ನಲ್ಲೇ ಬರದ ಆತಂಕದಲ್ಲಿರೋ ಮಂಡ್ಯ ಜಿಲ್ಲೆಯ ರೈತರಿಗೆ ಜಿಲ್ಲಾಡಳಿತ ಮತ್ತೊಂದು ಬಿಗ್ ಶಾಕ್ ನೀಡಿದೆ.

ಕೃಷ್ಣರಾಜಸಾಗರ ಜಲಾಶಯ ನಾಡಿಗೆ ನೀರುಣಿಸುವ ಡ್ಯಾಂ. ಮಂಡ್ಯ, ಮೈಸೂರು ಕೊಡಗು ಭಾಗದ ರೈತರನ್ನು ಕಾಪಾಡುವ ಜೀವನದಿ. ಬೆಂಗಳೂರಿಗರು ಕುಡಿಯುವ ಹನಿ ಹನಿ ನೀರು ಕೂಡ ಇದೇ ಡ್ಯಾಂನಿಂದ ಬರೋದು. ಜೀವನದಿ ಎಂಬ ಕಾವೇರಿ ಈಗ ಜೀವಕಳೆ ಕಳೆದುಕೊಂಡಿದ್ದಾಳೆ.

ಮುಂಗಾರು ಮಳೆ ಆರಂಭದಲ್ಲಿಯೇ ನಿರಾಸೆ ಉಂಟುಮಾಡಿದೆ. ಇದರ ಮಧ್ಯೆಯೇ ಬರದ ಆತಂಕದಲ್ಲಿರುವ ಮಂಡ್ಯ, ಮೈಸೂರು ಜಿಲ್ಲೆ ರೈತರಿಗೆ ಈಗ ಜಿಲ್ಲಾಡಳಿತ ನಿರ್ಧಾರದಿಂದ ಗಾಯದ ಮೇಲೆ ಉಪ್ಪು ಸವರಿದಂತಾಗಿದೆ.

ಕೆಆರ್‌ಎಸ್ ಅಣೆಕಟ್ಟಿನಲ್ಲಿ ಈಗ ಉಳಿದಿರೋದು ಕೇವಲ 11 ಟಿಎಂಸಿ ನೀರು. ಅದರಲ್ಲಿ 5 ಟಿಎಂಸಿ ಡೆಡ್ ಸ್ಟೋರೆಜ್. ಬಳಕೆಗೆ ಸಿಗೋದು ಕೇವಲ 6 ಟಿಎಂಸಿ ನೀರು.

ಹೀಗಾಗಿ ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡಿರುವ ಜಿಲ್ಲಾಡಳಿತ ಮುಂದಿನ 3 ತಿಂಗಳು ಕುಡಿಯುವ ನೀರಿನ ನಿರ್ವಹಣೆಗಾಗಿ ನಿರ್ಧಾರಕ್ಕೆ ಬಂದಿದೆ.

ಫ್ರಾನ್ಸ್‌ನಲ್ಲಿ ನಡೆಯಲಿರುವ ಜಿ7 ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ಮೋದಿ ಶೀಘ್ರದಲ್ಲೇ ಅಮೆರಿಕ ಅಧ್ಯಕ್ಷ ಟ್ರಂಪ್ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ. ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ ಮತ್ತು ಪ್ರಮುಖ ವಲಯಗಳಲ್ಲಿ ಸಹಕಾರವನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ಹಲವಾರು ವಿಷಯಗಳ ಕುರಿತು ಉಭಯ ನಾಯಕರು ಚರ್ಚೆ ನಡೆಸುವ ಸಾಧ್ಯತೆಯಿದೆ. ಮೂಲಗಳ ಪ್ರಕಾರ, ಪ್ರಾದೇಶಿಕ ಭದ್ರತಾ ಬೆಳವಣಿಗೆಗಳು, ವಿಶೇಷವಾಗಿ ಪಶ್ಚಿಮ ಏಷ್ಯಾದ ಪರಿಸ್ಥಿತಿ ಮತ್ತು ಹಾರ್ಮುಜ್ ಜಲಸಂಧಿಯ ಸುತ್ತಲಿನ ಕಳವಳಗಳು ಚರ್ಚೆಗಳಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುವ ನಿರೀಕ್ಷೆಯಿದೆ.

# ಮೋದಿಯನ್ನು ಕಿಲ್ಲರ್ ಎಂದು ಹೊಗಳಿದ ಟ್ರಂಪ್




ಪ್ಯಾರಿಸ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅತ್ಯಂತ ಶಾಂತ, ಸಂಯಮಶೀಲ ಮತ್ತು ಒಬ್ಬ ಪಕ್ಕಾ ಕಿಲ್ಲರ್ ಎಂದು ಹೊಗಳಿದ್ದಾರೆ.

ಫ್ರಾನ್ಸ್‌ನಲ್ಲಿ ಎವಿಯನ್-ಲೆ-ಬೈನ್ಸ್ ನಡೆಯುತ್ತಿರುವ ಜಿ7 ಶೃಂಗಸಭೆಯ ವೇಳೆ ದ್ವಿಪಕ್ಷಕೀಯ ಮಾತುಕತೆ ನಡೆದ ಬಳಿಕ ಟ್ರಂಪ್ ಮಾಧ್ಯಮಗಳ ಜೊತೆ ಮಾತನಾಡಿದರು.

ನನ್ನ ಸ್ವಭಾವ ಎಲ್ಲರಿಗೂ ಗೊತ್ತಿದೆ. ಆದರೆ ಮೋದಿ ಅವರು ಹೊರಗಿನಿಂದ ನೋಡಲು ತುಂಬಾ ಶಾಂತವಾಗಿ ಮತ್ತು ಕೂಲ್ ಆಗಿ ಕಾಣುತ್ತಾರೆ. ಆದರೆ ನಿರ್ಧಾರ ತೆಗೆದುಕೊಳ್ಳುವಾಗ ಅವರು ಪಕ್ಕಾ ಕಿಲ್ಲರ್ ಎಂದು ತಮಾಷೆ ಮಾಡಿದ್ದಾರೆ.

ನಾನು ಅಧ್ಯಕ್ಷನಾಗಿರುವವರೆಗೆ ಅವರಿಗೆ (ಭಾರತ) ಶ್ವೇತಭವನದಲ್ಲಿ ಉತ್ತಮ ಸ್ನೇಹಿತನಿದ್ದಾನೆ.ಇಲ್ಲಿರುವ ಪ್ರತಿಯೊಬ್ಬರೂ ಭಾರತವನ್ನು ಪ್ರೀತಿಸುತ್ತಾರೆ ಮತ್ತು ಮೋದಿ ಅವರ ಬಗ್ಗೆಯೂ ಅವರಿಗೆ ಅಪಾರ ಗೌರವವಿದೆ ಎಂದು ಹೇಳಿದರು.

ಭಾರತ ಮತ್ತು ಅಮೆರಿಕ ನಡುವಿನ ಸಂಬಂಧ ಎಂದಿಗೂ ಇಷ್ಟು ಗಟ್ಟಿಯಾಗಿರಲಿಲ್ಲ. ವೈಯಕ್ತಿಕವಾಗಿ ಮತ್ತು ದೇಶಗಳ ನಡುವೆ ಅತ್ಯಂತ ಆಪ್ತ ಒಡನಾಟವಿದೆ. ಭಾರತದ ಮೇಲೆ ಯಾವುದೇ ದಾಳಿ ನಡೆದರೂ ಅಮೆರಿಕ ಬೆಂಬಲವಾಗಿ ನಿಲ್ಲುತ್ತದೆ ಮತ್ತು ಸಹಾಯ ಮಾಡುತ್ತದೆ ಎಂದು ಟ್ರಂಪ್ ಭರವಸೆ ನೀಡಿದರು. ಇದೇ ವೇಳೆ ಲಘು ಹೇಳಿಕೆಯಲ್ಲಿ, ಟ್ರಂಪ್ ತಮ್ಮ ವ್ಯಕ್ತಿತ್ವವನ್ನು ಪ್ರಧಾನಿಯವರ ವ್ಯಕ್ತಿತ್ವದೊಂದಿಗೆ ಹೋಲಿಸುತ್ತಾ, "ಪ್ರಧಾನಿ ಮೋದಿ ನನಗಿಂತ ಭಿನ್ನ, ಅವರು ನೋಡಲು ಶಾಂತ, ಕೂಲ್ ಆದರೆ ಕಿಲ್ಲರ್, ನಾನು ಹಾಗೆ ಅಲ್ಲ. ಅವರನ್ನು ನೋಡಿ" ಎಂದು ಹೇಳಿದರು.

ಟ್ರಂಪ್ ಪದೇ ಪದೇ ಪ್ರಧಾನಿ ಮೋದಿ ಬಗ್ಗೆ ಪ್ರೀತಿಯಿಂದ ಮಾತನಾಡಿದ್ದಾರೆ, ಆಗಾಗ್ಗೆ ಅವರ ನಾಯಕತ್ವ ಶೈಲಿ ಮತ್ತು ರಾಜಕೀಯ ದೀರ್ಘಾವಧಿಯನ್ನು ಹೊಗಳಿದ್ದಾರೆ.

ಈ ತಿಂಗಳ ಆರಂಭದಲ್ಲಿ, ಭಾರತದ ಅತಿ ಹೆಚ್ಚು ಕಾಲ ಸೇವೆ ಸಲ್ಲಿಸಿದ ಪ್ರಧಾನಿಯಾಗಿ ನರೇಂದ್ರ ಮೋದಿ ಅವರನ್ನು ಟ್ರಂಪ್ ಅಭಿನಂದಿಸಿದ್ದರು. ಅವರನ್ನು "ಬಲವಾದ, ಆರೋಗ್ಯಕರ ಮತ್ತು ಬುದ್ಧಿವಂತ ವ್ಯಕ್ತಿ" ಎಂದು ಬಣ್ಣಿಸಿದರು ಮತ್ತು ಅವರು ಮುಂದಿನ ವರ್ಷಗಳಲ್ಲಿ ದೇಶವನ್ನು ಯಶಸ್ವಿಯಾಗಿ ಮುನ್ನಡೆಸುತ್ತಾರೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಫ್ರಾನ್ಸ್‌ನ ಎವಿಯನ್‌ನಲ್ಲಿ ನಡೆದ ಜಿ7 ಶೃಂಗಸಭೆಯಲ್ಲಿ ನಡೆದ ಮಾತುಕತೆಯು, 16 ತಿಂಗಳಿಗೂ ಹೆಚ್ಚು ಅವಧಿಯಲ್ಲಿ ಮೋದಿ ಮತ್ತು ಟ್ರಂಪ್ ನಡುವಿನ ಮೊದಲ ಮುಖಾಮುಖಿ ಸಭೆಯಾಗಿದೆ.

ಫ್ರಾನ್ಸ್‌ನಲ್ಲಿ ನಡೆಯಲಿರುವ ಜಿ7 ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ಮೋದಿ ಶೀಘ್ರದಲ್ಲೇ ಅಮೆರಿಕ ಅಧ್ಯಕ್ಷ ಟ್ರಂಪ್ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ. ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ ಮತ್ತು ಪ್ರಮುಖ ವಲಯಗಳಲ್ಲಿ ಸಹಕಾರವನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ಹಲವಾರು ವಿಷಯಗಳ ಕುರಿತು ಉಭಯ ನಾಯಕರು ಚರ್ಚೆ ನಡೆಸುವ ಸಾಧ್ಯತೆಯಿದೆ. ಮೂಲಗಳ ಪ್ರಕಾರ, ಪ್ರಾದೇಶಿಕ ಭದ್ರತಾ ಬೆಳವಣಿಗೆಗಳು, ವಿಶೇಷವಾಗಿ ಪಶ್ಚಿಮ ಏಷ್ಯಾದ ಪರಿಸ್ಥಿತಿ ಮತ್ತು ಹಾರ್ಮುಜ್ ಜಲಸಂಧಿಯ ಸುತ್ತಲಿನ ಕಳವಳಗಳು ಚರ್ಚೆಗಳಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುವ ನಿರೀಕ್ಷೆಯಿದೆ. ಇಂಧನ ಕ್ಷೇತ್ರದಲ್ಲಿ ಸಹಯೋಗವನ್ನು ಗಾಢಗೊಳಿಸುವ ಮಾರ್ಗಗಳನ್ನು ಎರಡೂ ಕಡೆಯವರು ಅನ್ವೇಷಿಸುವ ಸಾಧ್ಯತೆಯಿದೆ.

ಭಾರತ-ಯುಎಸ್ ಸಂಬಂಧಗಳಲ್ಲಿ ನಿರ್ಣಾಯಕ ಹಂತದಲ್ಲಿ ಈ ಸಭೆ ಬಂದಿದೆ, ಎರಡೂ ದೇಶಗಳು ವ್ಯಾಪಾರದ ಮೇಲಿನ ವ್ಯತ್ಯಾಸಗಳನ್ನು ನಿರ್ವಹಿಸುವಾಗ ಕಾರ್ಯತಂತ್ರದ ಸಹಕಾರವನ್ನು ಬಲಪಡಿಸಲು ಮತ್ತು ಹಾರ್ಮುಜ್ ಜಲಸಂಧಿಯಲ್ಲಿನ ಇತ್ತೀಚಿನ ಉದ್ವಿಗ್ನತೆಗಳು ಸೇರಿದಂತೆ ವಿಕಸನಗೊಳ್ಳುತ್ತಿರುವ ಭೌಗೋಳಿಕ ರಾಜಕೀಯ ಬೆಳವಣಿಗೆಗಳ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿವೆ.

ಮಂಗಳವಾರ, ಫ್ರೆಂಚ್ ಕಮ್ಯೂನ್ ಎವಿಯನ್-ಲೆಸ್-ಬೈನ್ಸ್‌ನಲ್ಲಿ ನಡೆದ ಜಿ7 ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ಮೋದಿ ಟ್ರಂಪ್ ಅವರನ್ನು ಭೇಟಿಯಾದರು, ಇದು 16 ತಿಂಗಳ ನಂತರ ಅವರ ಮೊದಲ ಮುಖಾಮುಖಿ ಸಂವಾದವಾಗಿದೆ. ಇಬ್ಬರು ನಾಯಕರು ಹಸ್ತಲಾಘವವನ್ನು ವಿನಿಮಯ ಮಾಡಿಕೊಂಡರು, ನಂತರ ಸಂಕ್ಷಿಪ್ತ ಸಂಭಾಷಣೆ ನಡೆಸಿದರು. ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಆಯೋಜಿಸಿದ್ದ ಕಾರ್ಯಕ್ರಮಕ್ಕಾಗಿ ವಿಶ್ವ ನಾಯಕರು ಒಟ್ಟುಗೂಡಿದಾಗ ಇಬ್ಬರು ನಾಯಕರ ನಡುವಿನ ಸಂಕ್ಷಿಪ್ತ ಸಂವಾದ ನಡೆಯಿತು. ಫ್ರಾನ್ಸ್‌ನ ಎವಿಯನ್‌ನಲ್ಲಿ ನಡೆದ ಔಟ್ರೀಚ್ ಅಧಿವೇಶನಕ್ಕಾಗಿ ಇತರ ವಿಶ್ವ ನಾಯಕರೊಂದಿಗೆ ಇಬ್ಬರು ನಾಯಕರು ತಮ್ಮ ಸ್ಥಾನಗಳನ್ನು ಪಡೆದುಕೊಳ್ಳುವ ಮೊದಲು ಪ್ರಧಾನಿ ಮೋದಿ ಅವರು ಅಮೆರಿಕ ಅಧ್ಯಕ್ಷ ಟ್ರಂಪ್ ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿರುವುದನ್ನು ಜಿ7 ಶೃಂಗಸಭೆಯ ಸ್ಥಳದ ದೃಶ್ಯಗಳು ತೋರಿಸಿವೆ.



ಸಿಎಂ ಡಿ.ಕೆ. ಶಿವಕುಮಾರ್ ಅವರು ಸದಾಶಿವನಗರ ನಿವಾಸದ ಬಳಿ ಬುಧವಾರ ಬೆಳಗ್ಗೆ ಆಗಮಿಸಿದ್ದ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

## ರಾಮಮಂದಿರ ದೇಣಿಗೆ ಲೂಟಿ: 42 ಜನರ ವಿಚಾರಣೆ

ಲಕ್ನೋ: ಅಯೋಧ್ಯೆ ರಾಮಮಂದಿರ ದೇಣಿಗೆ ಲೂಟಿ ಸಂಬಂಧ ಎಸ್‌ಐಟಿ ತನಿಖೆ ತೀವ್ರಗೊಳಿಸಿದೆ. ಈವರೆಗೂ ಟ್ರಸ್ಟ್ ಪದಾಧಿಕಾರಿಗಳು, ಸಿಬ್ಬಂದಿ ಸೇರಿ 42 ಜನರನ್ನು ವಿಚಾರಣೆಗೆ ಒಳಪಡಿಸಿದೆ.

3ನೇ ದಿನವಾದ ಇವತ್ತು 2021ರಿಂದ ಈವರೆಗಿನ ದಾಖಲೆಗಳ ಪರಿಶೀಲನೆ ಮಾಡಿದೆ. ಜೊತೆಗೆ, ನೇಮಕಾತಿ ಪ್ರಕ್ರಿಯೆ, ದೇಣಿಗೆ ಸ್ವೀಕರಿಸುವ ಸಿಬ್ಬಂದಿಯ ಪೂರ್ವಾಪರ ವಿಚಾರಿಸಿ, ಹೊಣೆಗಾರಿಕೆಗಳ ಬಗ್ಗೆ ಪರಾಮರ್ಶಿಸಿದೆ.

ಜೊತೆಗೆ, ದೇಣಿಗೆ ವಿಭಾಗದ ಮುಖ್ಯವಾಗಿ ಹಣ ಎಣಿಕೆ ಹಾಗೂ ಉಸ್ತುವಾರಿ ಸಿಬ್ಬಂದಿಯ ಹೇಳಿಕೆ ದಾಖಲಿಸಿಕೊಂಡಿದೆ.

ಇನ್ನೂ, ರಾಮಮಂದಿರ ನಿರ್ಮಾಣ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರಾ ಪ್ರತಿಕ್ರಿಯಿಸಿ, ಎಸ್‌ಐಟಿ ತನಿಖೆಗೆ ಸಂಪೂರ್ಣ ಸಹಕಾರ ನೀಡ್ತೇವೆ. ಅಂದಹಾಗೆ, ಎಸ್‌ಐಟಿಯು 7 ದಿನಗಳ ಒಳಗೆ ಪ್ರಾಥಮಿಕ ವರದಿ ಹಾಗೂ 15 ದಿನಗಳ ಒಳಗೆ ಅಂತಿಮ ವರದಿಯನ್ನು ಯೋಗಿ ಆದಿತ್ಯನಾಥ್ ಸರ್ಕಾರಕ್ಕೆ ಸಲ್ಲಿಸಬೇಕಿದೆ.

## ವೈದ್ಯರ ಕೊರತೆಯಿಂದ 11 ಬಲಿ...?

ಮೈಸೂರು: ಜಯದೇವ ಹೃದ್ರೋಗ ಆಸ್ಪತ್ರೆ ರಾಜ್ಯದಲ್ಲಿ ಅತ್ಯಂತ ಪ್ರಸಿದ್ಧಿ ಪಡೆದಿರುವ ಆಸ್ಪತ್ರೆ. ಹೃದಯ ಸಂಬಂಧಿ ಕಾಲೆಗಳಿಗೆ ಚಿಕಿತ್ಸೆ ನೀಡುವುದರಲ್ಲಿ ಎತ್ತಿದ ಕೈ. ಆದರೆ ಇಂತಹ ಆಸ್ಪತ್ರೆ ವಿರುದ್ಧ ಇದೀಗ ಗಂಭೀರ ಆರೋಪವೊಂದು ಕೇಳಿಬಂದಿದೆ.

ಕಳೆದ 24 ಗಂಟೆಯಲ್ಲಿ ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ 11 ರೋಗಿಗಳು ಸಾವನ್ನಪ್ಪಿದ್ದಾರೆ ಎನ್ನಲಾಗುತ್ತಿದೆ. ಈ ಬಗ್ಗೆ ಮೃತ ರೋಗಿಗಳ ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ವೈದ್ಯರ ನಿರ್ಲಕ್ಷ್ಯವೇ ಇದಕ್ಕೆ ಕಾರಣವೆಂದು ಹೇಳಲಾಗುತ್ತಿರುವ ವಿಡಿಯೋಗಳು ವೈರಲ್ ಆಗಿದೆ. ಆದರೆ ಇದೀಗ ಸಂಸ್ಥೆಯ ನಿರ್ದೇಶಕ ಡಾ.ದಿನೇಶ್ ಸ್ಪಷ್ಟನೆ ನೀಡಿದ್ದಾರೆ.

**ಸಾಂಸ್ಕೃತಿಕ ನಗರಿ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ರೋಗಿಗಳ ಸರಣಿ ಸಾವುಗಳು ಮುಂದುವರಿದಿದ್ದು, 24 ಗಂಟೆಯಲ್ಲಿ ಬರೋಬ್ಬರಿ 11 ಜನ ರೋಗಿಗಳು ಮೃತಪಟ್ಟಿದ್ದಾರೆ ಎನ್ನಲಾಗುತ್ತಿದೆ. ಇದರಿಂದ ಆತಂಕಗೊಂಡಿರುವ ಸಾರ್ವಜನಿಕರು ಮತ್ತು ಮೃತ ರೋಗಿಗಳ ಕುಟುಂಬಸ್ಥರು ಆಸ್ಪತ್ರೆಯಲ್ಲಿ ವೈದ್ಯರೇ ಇರಲಿಲ್ಲ ಎಂಬ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಸದ್ಯ ಇದು ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ.**

ಇನ್ನು ಈ ವಿಚಾರ ವೈರಲ್ ಆಗುತ್ತಿದ್ದಂತೆ ಜಯದೇವ ಆಸ್ಪತ್ರೆ ನಿರ್ದೇಶಕ ಡಾ.ದಿನೇಶ್ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪ್ರತಿನಿತ್ಯ 600 ರಿಂದ 800 ಜನ ಹೊರ ರೋಗಿಗಳು ಬರುತ್ತಾರೆ. 100 ರಷ್ಟು ಜನ ದಾಖಲಾಗುತ್ತಾರೆ. ಈ ಪೈಕಿ ಬಹುತೇಕ ರೋಗಿಗಳು ತೀವ್ರ ಹೃದಯಾಘಾತ ಹೊಂದಿರುತ್ತಾರೆ. ನಮ್ಮಲ್ಲಿ ಚಿಕಿತ್ಸೆ ಮೊದಲು. ಇಂದು ಆಸ್ಪತ್ರೆಯಲ್ಲಿ ನಿಧನರಾದ ತೀವ್ರ ಹೃದಯಾಘಾತಕ್ಕೆ ಒಳಗಾಗಿದ್ದರು. ನಮ್ಮ ವೈದ್ಯರು ಈ ಎಲ್ಲಾ ರೋಗಿಗಳಿಗೂ ಚಿಕಿತ್ಸೆ ನೀಡಿದ್ದಾರೆ. ಸಾವನ್ನಪ್ಪಿರುವ ರೋಗಿಗಳು ಒಂದೇ ದಿನ ದಾಖಲಾದವರಲ್ಲ. ಹಲವು ದಿನಗಳಿಂದ ದಾಖಲಾದವರು ಇಂದು ಸಾವನ್ನಪ್ಪಿದ್ದಾರೆ. ಎಲ್ಲರೂ ಕೂಡ 60 ವರ್ಷ ವಯಸ್ಸು ಮೇಲ್ಪಟ್ಟವರು ಎಂದು ಮಾಹಿತಿ ನೀಡಿದರು.

ವೈದ್ಯರು ಇರಲಿಲ್ಲ ಎಂಬ ವಿಚಾರವಾಗಿ ಮಾತನಾಡಿದ ಅವರು, ರಾತ್ರಿ ಪಾಳಯದಲ್ಲಿ ನಾಲ್ಕು ಜನ ವೈದ್ಯರು ಇದ್ದೆ ಇರುತ್ತಾರೆ. ವೈದ್ಯರು ಇರಲಿಲ್ಲ ಎಂಬ ಸುದ್ದಿ ಸತ್ಯಕ್ಕೆ ದೂರವಾದದ್ದು. ಜಯದೇವ ಆಸ್ಪತ್ರೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ವಾಸಿಯಾಗಿದೆ. ಇಂತಹ ಸಂಸ್ಥೆಗೆ ಮಸಿ ಬಳೆಯುವ ಕೆಲಸ ಮಾಡುವುದು ಬೇಡ. ವಾರದ ಪ್ರಾರಂಭದಲ್ಲಿ ಹೆಚ್ಚಿನ ಸಂಖ್ಯೆಯ ರೋಗಿಗಳು ಆಸ್ಪತ್ರೆಗೆ ಬರುತ್ತಾರೆ. ನಮ್ಮಲ್ಲಿ 5ರಿಂದ 7% ವೈದ್ಯರ ಕೊರತೆ ಇದೆ. ಈ ಕಾರಣಕ್ಕಾಗಿಯೇ ಖಾಯಂ ಹುದ್ದೆಗಳನ್ನು ಕರೆಯಲಾಗಿದೆ. ಬೆಂಗಳೂರು, ಮೈಸೂರು ಎರಡು ಆಸ್ಪತ್ರೆಗಳಿಗೆ 25 ಖಾಯಂ ವೈದ್ಯರ ನೇಮಕಾತಿಗೆ ಕರೆ ನೀಡಿದ್ದೇವೆ. ಮುಂದಿನ ದಿನಗಳಲ್ಲಿ ಈ ಸಮಸ್ಯೆ ಕೂಡ ಬಗೆಹರಿಯಲಿದೆ ಎಂದು ಡಾ.ದಿನೇಶ್ ಹೇಳಿದ್ದಾರೆ.

ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್ ಭೇಟಿ ನೀಡಿ ರೋಗಿಗಳ ಸಾವಿನ ಸಂಬಂಧ ವೈದ್ಯರಿಂದ ಮಾಹಿತಿ ಪಡೆದರು. ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಒಂದೇ ದಿನ 11 ಜನ ಸಾವಿನ ಬಗ್ಗೆ ಮಾಹಿತಿ ಕೇಳಿದ್ದೇನೆ. ಕಳೆದ ಹತ್ತಾರು ವರ್ಷಗಳ ಸಾವಿನ ಪ್ರಮಾಣ ನೋಡಿದರೆ 4 ರಿಂದ 5% ಇದೆ. ಜಯದೇವ ಆಸ್ಪತ್ರೆ ರಾಜ್ಯಕ್ಕೆ ಮಾತ್ರವಲ್ಲ ದೇಶಕ್ಕೆ ಮಾದರಿಯಾಗಿದೆ.

ಸಾವಿನ ಬಗ್ಗೆ ಲೋಪ, ದೋಷ ಇದ್ದರೆ ವೈದ್ಯರ ಬಳಿ ಕೇಳಿ ಮಾಹಿತಿ ಕೊಡುತ್ತೇವೆ. ಸಾವಿನ ಬಗ್ಗೆ ನಿಖರ ಮಾಹಿತಿ ಕೇಳಿದ್ದೇನೆ. ಅವಲೋಕನ ಮಾಡುವಂತೆ ವೈದ್ಯರಿಗೆ ಹೇಳಿದ್ದೇನೆ ಎಂದರು.

## ಸಮಾಜ ಕಲ್ಯಾಣ ಖಾತೆಗೆ ಹೊಸ ನಾಯಕತ್ವ ನೀಡುವಂತೆ ರಾಷ್ಟ್ರೀಯ ಅಂಬೇಡ್ಕರ್ ಸೇನೆಯ ಆಗ್ರಹ

ಬೆಂಗಳೂರು: ರಾಜ್ಯ ಸಚಿವ ಸಂಪುಟ ಪುನರ್‌ರಚನೆ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಾರ್ಯವೈಖರಿಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ರಾಷ್ಟ್ರೀಯ ಅಂಬೇಡ್ಕರ್ ಸೇನೆ, ಎಚ್.ಸಿ. ಮಹದೇವಪ್ಪ ಅವರನ್ನು ಹೊಸ ಸಚಿವ ಸಂಪುಟದಲ್ಲಿ ಸೇರಿಸಿಕೊಳ್ಳಬಾರದು. ಒಂದು ವೇಳೆ ಸಚಿವರನ್ನಾಗಿ ಮಾಡಿದರೂ ಸಮಾಜ ಕಲ್ಯಾಣ ಖಾತೆಯನ್ನು ನೀಡಬಾರದು ಎಂದು ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದೆ.




ಸಂಘಟನೆಯು ಸಲ್ಲಿಸಿರುವ ಮನವಿಯಲ್ಲಿ, ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳ ಅಭಿವೃದ್ಧಿಗೆ ಮೀಸಲಾದ ಪ್ರಮುಖ ಇಲಾಖೆಯಾಗಿದ್ದರೂ, ಕಳೆದ ಅವಧಿಯಲ್ಲಿ ಇಲಾಖೆಯ ಕಾರ್ಯನಿರ್ವಹಣೆ ತೃಪ್ತಿಕರವಾಗಿರಲಿಲ್ಲ ಎಂದು ಆರೋಪಿಸಿದೆ.

ಎಸ್‌ಸಿಪಿ/ಟಿಎಸ್‌ಪಿ ನಿಧಿಗಳ ಬಳಕೆಯಲ್ಲಿ ಪಾರದರ್ಶಕತೆ ಕೊರತೆ ಕಂಡುಬಂದಿದ್ದು, ದಲಿತ ಸಮುದಾಯದ ಅಭಿವೃದ್ಧಿಗೆ ಮೀಸಲಾದ ಸಾವಿರಾರು ಕೋಟಿ ರೂಪಾಯಿ ಅನುದಾನವನ್ನು ಇತರೆ ಯೋಜನೆಗಳಿಗೆ ವರ್ಗಾಯಿಸುವ ಸಂದರ್ಭದಲ್ಲಿ ಸಚಿವರು ಮೌನ ವಹಿಸಿದ್ದಾರೆ ಎಂದು ದೂರಲಾಗಿದೆ.

ದಲಿತ ಸಮುದಾಯದ ಪರವಾಗಿ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಜಾರಿಗೆ ತರುವ ಬದಲು, ಕೆಲವು ಸಂಘಟನೆಗಳನ್ನು ರಾಜಕೀಯ ಉದ್ದೇಶಗಳಿಗೆ ಬಳಸಿಕೊಳ್ಳಲಾಗಿದೆ ಎಂಬ ಆರೋಪವನ್ನೂ ಸಂಘಟನೆ ಮಾಡಿದೆ. ಅಲ್ಲದೆ, ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳದಿರುವುದು ಆಡಳಿತ ವೈಫಲ್ಯಕ್ಕೆ ಸಾಕ್ಷಿಯಾಗಿದೆ ಎಂದು ತಿಳಿಸಿದೆ.

ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಬಿಡುಗಡೆ ವಿಳಂಬ, ಹಾಸ್ಟೆಲ್‌ಗಳಲ್ಲಿನ ಕಳಪೆ ಆಹಾರ ವ್ಯವಸ್ಥೆ, ಮೂಲಸೌಕರ್ಯಗಳ ಕೊರತೆ, ವಸತಿ ಶಾಲೆಗಳಲ್ಲಿ ನಡೆದಿರುವ ಲೈಂಗಿಕ ದೌರ್ಜನ್ಯ ಪ್ರಕರಣಗಳ ವಿರುದ್ಧ ಸಮರ್ಪಕ ಕ್ರಮ ಕೈಗೊಳ್ಳದಿರುವುದು ಸೇರಿದಂತೆ ಹಲವು ವಿಷಯಗಳನ್ನು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಇದರ ಜೊತೆಗೆ, ಇಲಾಖೆಯಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದಿರುವುದು, ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಅಧಿಕಾರಿಗಳನ್ನು ಒಂದೇ ಸ್ಥಳದಲ್ಲಿ ಮುಂದುವರಿಸಿರುವುದು ಹಾಗೂ ಕಲ್ಯಾಣ ಕಾರ್ಯಕ್ರಮಗಳಿಗಿಂತ ಪ್ರಚಾರ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಸಂಘಟನೆ ಆರೋಪಿಸಿದೆ.

ಸಮಾಜ ಕಲ್ಯಾಣ ಇಲಾಖೆಗೆ ದಲಿತ ಸಮುದಾಯದ ಸಮಸ್ಯೆಗಳ ಬಗ್ಗೆ ನೈಜ ಕಾಳಜಿ ಹೊಂದಿರುವ, ಪ್ರಗತಿಪರ ಚಿಂತನೆಯ ಹೊಸ ನಾಯಕತ್ವವನ್ನು ನೀಡಬೇಕು ಎಂದು ರಾಷ್ಟ್ರೀಯ ಅಂಬೇಡ್ಕರ್ ಸೇನೆ ಒತ್ತಾಯಿಸಿದೆ.

ಸರ್ಕಾರ ತಕ್ಷಣ ಸ್ಪಂದಿಸಿ ಸೂಕ್ತ ಕ್ರಮ ಕೈಗೊಳ್ಳದಿದ್ದರೆ, ಮುಂದಿನ ದಿನಗಳಲ್ಲಿ ಕೆಪಿಸಿಸಿ ಕಚೇರಿ ಹಾಗೂ ಮುಖ್ಯಮಂತ್ರಿ ನಿವಾಸದ ಮುಂದೆ ಹಂತ ಹಂತವಾಗಿ ತೀವ್ರ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಸಂಘಟನೆ ಎಚ್ಚರಿಕೆ ನೀಡಿದೆ.

ಭಾರತ ಸಾರಥಿ
18/06/2026
BHARATHA SARATHI KANNADA DAILY NEWS PAPER
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಕಲಾವಿದನ ಬದುಕು ಅತಂತ್ರ: ಬಾನಂದೂರು ಕೆಂಪಯ್ಯ

ಕೋಲಾರ

ಆಧುನಿಕತೆಯ ಭರಾಟೆಯಲ್ಲಿ ಜಾನಪದ ಕಲೆಗಳು ನಶಿಸಿ ಹೋಗುತ್ತಿವೆ ಎಂದು ಖ್ಯಾತ ಜಾನಪದ ಅಕಾಡೆಮಿಯ ಮಾಜಿ ಅಧ್ಯಕ್ಷ ಬಾನಂದೂರು ಕೆಂಪಯ್ಯ ಅಭಿಪ್ರಾಯಪಟ್ಟರು.

ಕೋಲಾರ ನಗರದ ಕನ್ನಡ ಭವನದಲ್ಲಿ ಈನೆಲ ಈಜಲ ಕಲೆ ಮತ್ತು ಸಾಂಸ್ಕೃತಿಕ ಸಂಸ್ಥೆ ಹಮ್ಮಿಕೊಂಡಿದ್ದ ಕರ್ನಾಟಕದ ಖ್ಯಾತ ಜಾನಪದ ಹಾಡುಗಾರ ಬಾನಂದೂರು ಕೆಂಪಯ್ಯ ಅವರ 75 ಜನ್ಮ ದಿನಾಚರಣೆ ಅಂಗವಾಗಿ ಮೂಡಲಸೀಮೆಯ ಕಾಲವಿದರಿಂದ ಗೀಯಗಾಯನ ಗುಚ್ಛ ಹಾಗೂ ಪ್ರಶಸ್ತಿ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಜಾನಪದ ಕಲೆಯನ್ನೇ ನಂಬಿ ಬದುಕುತ್ತಿದ್ದ ಇಂತಹ ಬೆಳೆಯುತ್ತಿರುವ ಕಲಾವಿದರ ಬದುಕು ಅತಂತ್ರ ಸ್ಥಿತಿಯಾಗಿದೆ. ಒಬ್ಬ ಕಲಾವಿದ ಇಂತಹ ದೊಡ್ಡ ಕಾರ್ಯಕ್ರಮವನ್ನು ಸ್ವಂತ ಖರ್ಚಿನಲ್ಲಿ ಮಾಡಬಹುದಾದರೆ ಅವರು ಪಟ್ಟ ಪಾಡು ಹೇಳತೀರದು. ಹಾಗಾಗಿ ಕಲಾವಿದರೆಲ್ಲರೂ ಒಗ್ಗಟ್ಟಾದಾಗ ನಾವು ನಮ್ಮ ಕಲೆಯನ್ನು ಮತ್ತು ಜೀವನವನ್ನು ತೃಪ್ತಿಕರವಾಗಿ ನಡೆಸಲು ಸಾಧ್ಯ. ಇಂದಿನ ಆಧುನಿಕತೆಯ ಜಗತ್ತಿನಲ್ಲಿ ಕಲಾವಿದರ ಬದುಕು ಮೂರಾಬಟ್ಟೆಯಾಗುತ್ತಿರುವ ಸಂದರ್ಭದಲ್ಲಿ ಸಂಸ್ಥೆಗಳು ಹಾಗೂ ಸರ್ಕಾರಿ ಅಕಾಡೆಮಿಗಳು ಇಂತಹ ಮೂಲೆಗುಂಪಾದ ಒಳ್ಳೆಯ ಜಾನಪದ ಕಲಾವಿದರನ್ನು ಗುರುತಿಸಿ ಅವರಿಗೆ ಸೂಕ್ತ ಸ್ಥಾನಮಾನವನ್ನು ನೀಡಿದಾಗ




ಜಾನಪದ ಕಲೆಗಳು ಉಳಿಬಹುದೆಂದು ಹೇಳುತ್ತಾ, ಎಲ್ಲೋ ಜೋಗಪ್ಪ, ತರವಲ್ಲ ತಗಿ ನಿನ ತಂಬೂರಿ, ತನುವಿನೊಳಗನುದಿನವಿದ್ದು ಮುಂತಾದ ಜಾನಪದ ಹಾಡುಗಳನ್ನು ಹೇಳುತ್ತಾ ಎಲ್ಲರನ್ನೂ ಬೆರಗುಗೊಳಿಸಿದರು.

ಪತ್ರಕರ್ತ ಗಣೇಶ್ ಬಾನಂದೂರು ಕೆಂಪಯ್ಯ ಅವರ ಕುರಿತು ಅಭಿನಂದನಾ ಭಾಷಣವನ್ನು ಮಾತಾನಾಡುತ್ತಾ ತಂದೆ ತಾಯಿಯಿಂದ ಜಾನಪದ ಹಾಡುಗಳು ರಕ್ತಗರ್ಭಿತವಾಗಿ ಪಡೆದುಕೊಂಡ ಕೆಂಪಯ್ಯ ಜಾನಪದ ಕ್ಷೇತ್ರದಲ್ಲಿ ಗಗನಕ್ಕೇರಿರುವುದು ಅದ್ಭುತವಾದ ಸಾಧನೆ ಮಾಡಿದ್ದಾರೆ. ಕೇವಲ ಗಾಯಕರಾಗದೆ ಶಿಕ್ಷಣ ಕ್ಷೇತ್ರದಲ್ಲಿಯೂ ಡಾಕ್ಟರೇಟ್ ಪಡೆದು ಎಲ್ಲಾ ಜಾನಪದ ಕಲಾವಿದರನ್ನು ಬೆಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಅಕಾಡೆಮಿಯ ಅಧ್ಯಕ್ಷರಾದ ಸಮಯದಲ್ಲಿ ಕಲಾವಿದ ಬದುಕನ್ನು, ಅವರ ಸಾಧನೆಗಳನ್ನು ಕುರಿತು ಹೊರತಂದ ಗ್ರಂಥ ಇಂದಿಗೂ ಮಾದರಿಯಾಗಿದೆ. ಅವರ ಹಾದಿಯಲ್ಲಿ ಕೋಲಾರದ ಕಲಾವಿದರೆಲ್ಲರೂ ಬೆಳೆದಿರುವುದು ಸಂತಸದ ಸಂಗತಿ ಎಂದರು.

ಖ್ಯಾತ ಜಾನಪದ ಕಲಾವಿದ ವೇಮಗಲ್ ನಾರಾಯಣಸ್ವಾಮಿ ಮಾತಾನಾಡಿ ಕೋಲಾರದಲ್ಲಿ ಬಹಳಷ್ಟು ಕಲಾವಿದರಿದ್ದಾರೆ. ಅವರಿಗೆ ಸೂಕ್ತ ಅವಕಾಶಗಳು ದೊರಕಬೇಕಾಗಿದೆ. ಹಿರಿಯ ಕಲಾವಿದರು ಅವರನ್ನು ಬೆಳೆಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು.

ಕರ್ನಾಟಕದಲ್ಲಿ ಕೋಲಾರ ಜಾನಪದದ ಮಣ್ಣಿನ ವಾಸನೆಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದ ಮತ್ತು ಕೊಂಡೊಯ್ಯುತ್ತಿರುವ ಅನೇಕ ಪ್ರಮುಖ ಕಲಾವಿದರಿದ್ದಾರೆ. ನಮ್ಮ ಪರಂಪರೆಯನ್ನು ಮುಂದುವರಿಸುವ ಪ್ರಯತ್ನ ಹಿರಿಯ ಕಲಾವಿದರು ಮಾಡಬೇಕೆಂದು ಹೇಳುತ್ತಾ ಉತ್ತರ ಕರ್ನಾಟಕದ ಮೂಲ ಜಾನಪದ ಹಾಡುಗಳನ್ನು ಹೇಳಿ ಎಲ್ಲರ ಮನ ರಂಜಿಸಿದರು.

ಕರ್ನಾಟಕ ಸಂಗೀತ, ನೃತ್ಯ ಕಲಾ ಅಕಾಡಮಿ ಸದಸ್ಯರಾದ ಡಿ ಆರ್ ರಾಜಪ್ಪ ಮಾತಾನಾಡಿಆಧುನಿಕತೆಯ ಪ್ರಭಾವದಿಂದ ಜಾನಪದ ಕಲೆಗಳು ಮರೆಯಾಗುತ್ತಿದ್ದು, ಈ ಕಲೆಯನ್ನು ನಂಬಿ ಬದುಕುವ ಕಲಾವಿದರ ಜೀವನ ಕೆಲವೊಮ್ಮೆ ಅತಂತ್ರವಾಗುವ ಸಾಧ್ಯತೆಯೂ ಇದೆ. ಇಂತಹ ಕಲಾವಿದರನ್ನು ಪ್ರೋತ್ಸಾಹಿಸಲು ಕರ್ನಾಟಕ ಜಾನಪದ ಅಕಾಡೆಮಿಯು ಜನಪದ ಕಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಶ್ರಮಿಸಬೇಕು.

ಹಾಗಾಗಿ ಇಂತಹ ಕೋಲಾರದಂತಹ ಕಲಾವಿದರನ್ನು ಬೆಳೆಸಿದ ಬಾನಂದೂರು ಅವರನ್ನು ನೆನಪಿಸುತ್ತಾ ಅವರ ಪ್ರೊತ್ಸಾಹ ಮತ್ತು ಪ್ರೇರಣೆ ಮರೆಯಲು ಸಾಧ್ಯವಿಲ್ಲ ಎನ್ನುತ್ತಾ ವೇದಿಕೆಯಲ್ಲಿ ಜಾನಪದ ಹಾಡುಗಳನ್ನು ಹೇಳಿದರು. ಕರ್ನಾಟಕ ಸಂಗೀತ ನೃತ್ಯ ಕಲಾ ಅಕಾಡಮಿ ಸದಸ್ಯರಾದ ಮದ್ದೇರಿ ಮುನಿರೆಡ್ಡಿ ಮಾತಾನಾಡಿ ಕೋಲಾರ ಜಾನಪದ ಕಲಾವಿದರು ಕರ್ನಾಟಕದಲ್ಲಿರುವ ಪ್ರತಿಯೊಂದು ಹಳ್ಳಿಗಳ ಮಣ್ಣಿನ ವಾಸನೆಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದ ಅನೇಕ ಕಲಾವಿದ್ದಾರೆ. ಇಂತಹ ಸಾಲಿನಲ್ಲಿ ಇದೀಗ ವೆಂಕಟಾಚಲಪತಿ ಅವರು ಒಂದು ಒಳ್ಳೆಯ ಕಾರ್ಯಕ್ರಮ ಮಾಡಿ ಕೋಲಾರ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸುವಂತೆ ಮಾಡಿದ್ದಾರೆ ಹಾಗಾಗಿ ಅವರನ್ನು ಶ್ಲಾಘಿಸುತ್ತಾ ಇನ್ನೂ ಉತ್ತರದ ಕಾರ್ಯಕ್ರಮಗಳನ್ನು ಮಾಡಲಿ ಎಂದರು.

ಪ್ರಾಸ್ತಾವಿಕವಾಗಿ ಮಾತಾನಾಡಿದ ಕವಿ ಡಾ. ಶರಣಪ್ಪ ಗಬ್ಬೂರು ಕೋಲಾರದ ಕಲಾವಿದರು ಇನ್ನೂ ಬಡತನದಲ್ಲಿಯೇ ಜೀವಂತವಾಗಿದ್ದಾರೆ ಎನ್ನುವುದಕ್ಕೆ ಉತ್ತಮ ಉದಾಹರಣೆ ಎಂದರೆ ವೆಂಕಟಾಚಲಪತಿ ಕಲಾವಿದನೇ ಸಾಕ್ಷಿಯಾಗುತ್ತಾರೆ. ಒಳ್ಳೆಯ ಮನಸ್ಸಿನಿಂದ ನಾಡಿನ ಹೆಸರಾಂತ ಹಾಡುಗಾರರನ್ನು ಇಲ್ಲಿ ಗೌರವಿಸುವ ಕಾರ್ಯ ಮಾಡುತ್ತಿರುವುದು ಕೋಲಾರ ಜಿಲ್ಲೆಯ ಕೀರ್ತಿ ಇಡೀ ನಾಡಿಗೆ ಪರಿಚಯಿಸುವ ಕೆಲಸ ನಮ್ಮ ವೆಂಕಟಾಚಲಪತಿ ಮಾಡಿದ್ದಾರೆ ಎಂದರು.

ಸಮಾರಂಭದಲ್ಲಿ ಕವಿ ಲಕ್ಷ್ಮಯ್ಯ, ಅರಿನಾಗನಹಳ್ಳಿ, ಮುನಿವೆಂಕಟಮ್ಮ, ಶ್ರೀ ನಿಜಾನಂದ ಸುಬ್ಬಾರೆಡ್ಡಿ ಸ್ವಾಮಿ, ಗಮನ ಶಾಂತಮ್ಮ, ಬುದ್ಧಿಮಾಂದ್ಯ ಶಾಲೆಯ ಶಂಕರ್, ಎಂ.ಎಸ್ ಶೇಖರ್ ಸೋಮಣ್ಣ ಮುಂತಾದವರಿಗೆ ಶ್ರೀ ಬಾನಂದೂರು ಕೆಂಪಯ್ಯ ಹೆಸರಿನಲ್ಲಿ ರಾಜ್ಯ ಮಟ್ಟದ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

## ಫಾರಿನ್‌ಅಡ್ಮಿಟ್ಸ್‌ನಲ್ಲಿ ಕಾರ್ಯತಂತ್ರದ ಹೂಡಿಕೆ ಮಾಡಿದ ಕ್ರೈಜಾಕ್

ಬೆಂಗಳೂರು

ಭಾರತದ ಪ್ರಮುಖ ತಂತ್ರಜ್ಞಾನ ಆಧಾರಿತ ಅಂತರರಾಷ್ಟ್ರೀಯ ವಿದ್ಯಾರ್ಥಿ ಚಲನಶೀಲತಾ ವೇದಿಕೆಗಳಲ್ಲಿ ಒಂದಾದ ಕ್ರೈಜಾಕ್ ಲಿಮಿಟೆಡ್, 1 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸೇವೆ ಸಲ್ಲಿಸಿರುವ ಹಾಗೂ ರೂ.1,500 ಕೋಟಿಗೂ ಅಧಿಕ ಶಿಕ್ಷಣ ಸಾಲಗಳ ವ್ಯವಸ್ಥೆ ಮಾಡಿರುವ

ಕೃತಕ ಬುದ್ಧಿಮತ್ತೆ ಆಧಾರಿತ ವಿದ್ಯಾರ್ಥಿ ಚಲನಶೀಲತಾ ವೇದಿಕೆ ಫಾರಿನ್‌ಅಡ್ಮಿಟ್ಸ್ ಅನ್ನು ನಿರ್ವಹಿಸುವ ಎಡ್ಯೂಮೆಂಟ್ ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಲ್ಲಿ ಕಾರ್ಯತಂತ್ರದ ಹೂಡಿಕೆ ಮಾಡಿರುವುದಾಗಿ ಘೋಷಿಸಿದೆ. ಕಡ್ಡಾಯವಾಗಿ ಪರಿವರ್ತಿಸಬಹುದಾದ ಡಿಬೆಂಚರ್‌ಗಳು ಹಾಗೂ ಕಡ್ಡಾಯವಾಗಿ ಪರಿವರ್ತಿಸಬಹುದಾದ ಆದ್ಯತೆಯ ಷೇರುಗಳ ಮೂಲಕ ಈ ಹೂಡಿಕೆ ಮಾಡಲಾಗಿದ್ದು, ವಿದ್ಯಾರ್ಥಿಗಳಿಗೆ ಸಮಗ್ರ ಸೇವೆ ಒದಗಿಸುವ ತಂತ್ರಜ್ಞಾನ ಆಧಾರಿತ ವಿದ್ಯಾರ್ಥಿ ಚಲನಶೀಲತಾ ವೇದಿಕೆಯಾಗುವ ಕ್ರೈಜಾಕ್‌ನ ಗುರಿಗೆ ಇದು ಮಹತ್ವದ ಹೆಜ್ಜೆಯಾಗಿದೆ.

ಈ ಹೂಡಿಕೆಯಿಂದ ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯಲು ಬಯಸುವ ವಿದ್ಯಾರ್ಥಿಗಳಿಗೆ ಗಮ್ಯಸ್ಥಾನ ಆಯ್ಕೆ, ಶಿಕ್ಷಣ ಸಾಲ ವ್ಯವಸ್ಥೆ ಹಾಗೂ ವೀಸಾ ಪ್ರಕ್ರಿಯೆ ಸೇರಿದಂತೆ ಪ್ರಮುಖ ಹಂತಗಳಲ್ಲಿ ಮತ್ತಷ್ಟು ಪರಿಣಾಮಕಾರಿ ನೆರವು ದೊರೆಯಲಿದೆ. ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನದ ನೆರವಿನಿಂದ ವೇಗ, ನಿಖರತೆ ಹಾಗೂ ವ್ಯಾಪಕ ಸೇವೆ ಒದಗಿಸುವ ಉದ್ದೇಶವನ್ನು ಸಂಸ್ಥೆ ಹೊಂದಿದೆ. ಫಾರಿನ್‌ಅಡ್ಮಿಟ್ಸ್ ತನ್ನ ಅಸ್ತಿತ್ವದಲ್ಲಿರುವ ಬ್ರ್ಯಾಂಡ್ ಗುರುತು ಹಾಗೂ ನಿರ್ವಹಣಾ ವ್ಯವಸ್ಥೆಯ ಅಡಿಯಲ್ಲಿ ಸ್ವತಂತ್ರ ಸಂಸ್ಥೆಯಾಗಿದೆ.

## ಶಾಖೆ ತೆರೆದ ಬಂಧನ್ ಬ್ಯಾಂಕ್

ಬೆಂಗಳೂರು: ಮುಂಬೈನಲ್ಲಿಂದು ಕಾರ್ಪೊರೇಟ್ ಬ್ಯಾಂಕಿಂಗ್ ಶಾಖೆ ಕಾರ್ಯಾರಂಭ ಮಾಡಿದೆ ಬಂಧನ್ ಬ್ಯಾಂಕ್ ಘೋಷಿಸಿದ್ದು, ಇದು ಭಾರತದ ಆರ್ಥಿಕ ರಾಜಧಾನಿಯಲ್ಲಿ ತನ್ನ ಅಸ್ತಿತ್ವ ಬಲಪಡಿಸುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಮುಂಬೈನ ಬಿಕೆಸಿಯಲ್ಲಿರುವ ಐಎಸ್‌ಎಸ್ ಟವರ್‌ನಲ್ಲಿ ತೆರೆದಿರುವ ಹೊಸ ಶಾಖೆಯನ್ನು ಬಂಧನ್ ಬ್ಯಾಂಕಿನ ಎಂಡಿ ಮತ್ತು ಸಿಇಒ ಶ್ರೀ ಪಾರ್ಥ ಪ್ರತಿಮ್ ಸೇನ್‌ಗುಪ್ತಾ ಅವರು ಉದ್ಘಾಟಿಸಿದರು. ಬ್ಯಾಂಕಿನ ಇಡಿ ಮತ್ತು ಸಿಬಿಒ ಶ್ರೀ ರಾಜಿಂದರ್ ಕುಮಾರ್ ಬಬ್ಬರ್, ಇಡಿ ಮತ್ತು ಸಿಒಒ ಶ್ರೀ ರತನ್ ಕುಮಾರ್ ಕೇಶ್ ಮತ್ತು ವೋಲ್ ಸೇಲ್ ಬ್ಯಾಂಕಿಂಗ್ ವಿಭಾಗದ ಮುಖ್ಯಸ್ಥ ಶ್ರೀ ಸತೀಶ್ ಕುಮಾರ್ ಮತ್ತು ಬ್ಯಾಂಕಿನ ಇತರೆ ಹಿರಿಯ ಅಧಿಕಾರಿಗಳ ಉಪಸ್ಥಿತರಿದ್ದರು.

ಈ ವಿಶೇಷ ಕಾರ್ಪೊರೇಟ್ ಬ್ಯಾಂಕಿಂಗ್ ಶಾಖೆಯನ್ನು ಕಾರ್ಪೊರೇಟ್ ಮತ್ತು ಸಾಂಸ್ಥಿಕ ಗ್ರಾಹಕರ ಅಗತ್ಯತೆಗಳನ್ನು ಪೂರೈಸಲು ಅನುಗುಣವಾಗಿ ವಿನ್ಯಾಸಗೊಳಿಸಲಾಗಿದೆ. ಇದು ಸಮಗ್ರ ಹಣಕಾಸು ಪರಿಹಾರಗಳನ್ನು ನೀಡುತ್ತದೆ. ಶಾಖೆಯು ದೊಡ್ಡ ಕಾರ್ಪೊರೇಟ್‌ಗಳು, ಮಧ್ಯಮ ಗಾತ್ರದ ಉದ್ಯಮಗಳು ಮತ್ತು ಸಾಂಸ್ಥಿಕ ಗ್ರಾಹಕರಿಗೆ ಪರಿಪೂರ್ಣ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು ಗಮನ ಹರಿಸುತ್ತದೆ. ಬಿಕೆಸಿಯಲ್ಲಿ ಸಮರ್ಪಿತ ಕಾರ್ಪೊರೇಟ್ ಬ್ಯಾಂಕಿಂಗ್ ಹಬ್ ಸ್ಥಾಪಿಸುವ ಮೂಲಕ ಬಂಧನ್ ಬ್ಯಾಂಕ್, ಗ್ರಾಹಕರ ಸಂಬಂಧಗಳನ್ನು ಮತ್ತಷ್ಟು ಗಾಢವಾಗಿಸಲು, ಸೇವಾ ವಿತರಣೆಯನ್ನು ಹೆಚ್ಚಿಸಲು ಮತ್ತು ಅದರ ಬೆಳೆಯುತ್ತಿರುವ ಕಾರ್ಪೊರೇಟ್ ಗ್ರಾಹಕ ನೆಲೆಗೆ ವೇಗವಾಗಿ, ಹೆಚ್ಚು ವಿಶೇಷವಾದ ಬೆಂಬಲ ಒದಗಿಸುವ ಗುರಿ ಹೊಂದಿದೆ. ಈ ಶಾಖೆಯು ಸಂಬಂಧ ನಿರ್ವಹಣೆ, ರಚನಾತ್ಮಕ ಹಣಕಾಸು ಪರಿಹಾರಗಳು ಮತ್ತು ವಲಯ-ನಿರ್ದಿಷ್ಟ ಸಲಹಾ ಸೇವೆಗಳಿಗೆ ಪ್ರಮುಖ ಕೇಂದ್ರವಾಗಿಯೂ ಕಾರ್ಯ ನಿರ್ವಹಿಸುತ್ತದೆ. ಇದು ಕಾರ್ಪೊರೇಟ್ ಗ್ರಾಹಕರಿಗೆ ಉನ್ನತ-ಸ್ಪರ್ಶದ ಸಮಾಲೋಚನಾ ಬ್ಯಾಂಕಿಂಗ್ ಕಾರ್ಯ ವಿಧಾನವನ್ನು ಖಚಿತಪಡಿಸುತ್ತದೆ.

ಈ ಸಂದರ್ಭದಲ್ಲಿ ಮಾತನಾಡಿದ ಬಂಧನ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಶ್ರೀ ಪಾರ್ಥ ಪ್ರತಿಮ್ ಸೇನ್‌ಗುಪ್ತಾ, "ಬಿಕೆಸಿಯಲ್ಲಿ ನಮ್ಮ ಸಮರ್ಪಿತ ಕಾರ್ಪೊರೇಟ್ ಬ್ಯಾಂಕಿಂಗ್ ಶಾಖೆ ಆರಂಭವನ್ನು ಘೋಷಿಸುತ್ತಿರುವುದು ನಮಗೆ ಸಂತೋಷ ತಂದಿದೆ. ಈ ಉಪಕ್ರಮವು ನಮ್ಮ ಕಾರ್ಪೊರೇಟ್ ಬ್ಯಾಂಕಿಂಗ್ ಶಾಖೆಗಳನ್ನು ವಿಸ್ತರಿಸುವ ಮತ್ತು ನಮ್ಮ ಕಾರ್ಪೊರೇಟ್ ಗ್ರಾಹಕರಿಗೆ ವಿಶೇಷವಾದ, ಸಂಬಂಧ-ಪೂರಕ ಸೇವೆಗಳನ್ನು ಒದಗಿಸುವ ನಮ್ಮ ಕಾರ್ಯತಂತ್ರ ಗಮನವನ್ನು ಪ್ರತಿಬಿಂಬಿಸುತ್ತದೆ. ನಾವು ನಮ್ಮ ಬ್ಯಾಂಕಿಂಗ್ ಜಾಲ ಬಲಪಡಿಸುವುದನ್ನು ಮುಂದುವರಿಸುವ ಜತೆಗೆ, ಸುಸ್ಥಿರ ಬೆಳವಣಿಗೆಗೆ ಮತ್ತು ಗ್ರಾಹಕ ವಿಭಾಗಗಳಲ್ಲಿ ನವೀನ, ಹೊಂದಿಕೊಳ್ಳುವ ಬ್ಯಾಂಕಿಂಗ್ ಪರಿಹಾರಗಳನ್ನು ತಲುಪಿಸಲು ನಾವು ಬದ್ಧರಾಗಿದ್ದೇವೆ. ಈ ಮುಂದಿನ ಹಂತದ ಬೆಳವಣಿಗೆಯನ್ನು ಚಾಲನೆ ಮಾಡುವಲ್ಲಿ ನಮ್ಮ ಕಾರ್ಪೊರೇಟ್ ಬ್ಯಾಂಕಿಂಗ್ ಶಾಖೆ ಪ್ರಮುಖ ಪಾತ್ರ ವಹಿಸುತ್ತದೆ" ಎಂದರು.

# ಕಾರು ಮಾರಾಟ ಈಗ ಇನ್ನಷ್ಟು ಸುಲಭ

ಬೆಂಗಳೂರು

ಬಳಸಿದ ಕಾರುಗಳ ಖರೀದಿ ಮತ್ತು ಮಾರಾಟ ಕ್ಷೇತ್ರದ ಪ್ರಮುಖ ಸಂಸ್ಥೆಯಾಗಿರುವ ಸ್ಪಿನ್ನಿ, ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರನ್ನು ಒಳಗೊಂಡಿರುವ ತನ್ನ 'ಗಾಡ್ ಪ್ರಾಮಿಸ್' ಅಭಿಯಾನವನ್ನು ಕರ್ನಾಟಕಕ್ಕೂ ವಿಸ್ತರಿಸಿದೆ. ಇದರ ಮೂಲಕ ರಾಜ್ಯದಲ್ಲಿ ತನ್ನ ಸೇವಾ ವ್ಯಾಪ್ತಿಯನ್ನು ಮತ್ತಷ್ಟು ಬಲಪಡಿಸುವ ಗುರಿಯನ್ನು ಹೊಂದಿದೆ.

ಆರಂಭದಿಂದಲೂ ಬೆಂಗಳೂರು ಸ್ಪಿನ್ನಿಯ ಅತಿದೊಡ್ಡ ಮಾರುಕಟ್ಟೆಯಾಗಿದ್ದು, ದೇಶದ ಅತ್ಯಂತ ಚುರುಕಾದ ಬಳಸಿದ ಕಾರುಗಳ ಮಾರುಕಟ್ಟೆಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ವಿಶ್ವಾಸಾರ್ಹ, ಪಾರದರ್ಶಕ ಹಾಗೂ ತಂತ್ರಜ್ಞಾನ ಆಧಾರಿತ ವಾಹನ ವಹಿವಾಟುಗಳಿಗೆ ಬೆಂಗಳೂರಿನ




ಗ್ರಾಹಕರು ನೀಡುತ್ತಿರುವ ಆದ್ಯತೆಯು ಸಂಸ್ಥೆಯ ಬೆಳವಣಿಗೆಗೆ ಪ್ರಮುಖ ಕಾರಣವಾಗಿದೆ.

ಈ ಅಭಿಯಾನದಡಿ ಬೆಂಗಳೂರು ಸೇರಿದಂತೆ ಕರ್ನಾಟಕದ ವಿವಿಧ ನಗರಗಳ ಕಾರು ಮಾರಾಟಗಾರರಿಗೆ ನ್ಯಾಯಸಮ್ಮತ ಬೆಲೆ ನಿರ್ಧಾರ, ತ್ವರಿತ ಹಣ ಪಾವತಿ ಹಾಗೂ ವಾಹನ ನೋಂದಣಿ ಪ್ರಮಾಣಪತ್ರ ವರ್ಗಾವಣೆ ಪ್ರಕ್ರಿಯೆಯಲ್ಲಿ ಸಂಪೂರ್ಣ ನೆರವು ನೀಡಲಾಗುತ್ತದೆ. ಇದರಿಂದ ಕಾರು ಮಾರಾಟ ಪ್ರಕ್ರಿಯೆ ಮತ್ತಷ್ಟು ಸುಗಮ ಮತ್ತು ತೊಂದರೆರಹಿತವಾಗಲಿದೆ.

ಸ್ಪಿನ್ನಿಯ 'ಗಾಡ್ ಪ್ರಾಮಿಸ್' ಅಭಿಯಾನವು ಗ್ರಾಹಕರಿಗೆ ವಿಶ್ವಾಸ ಮೂಡಿಸುವುದರ ಜೊತೆಗೆ, ಬಳಸಿದ ಕಾರುಗಳ ಮಾರುಕಟ್ಟೆಯಲ್ಲಿ ಪಾರದರ್ಶಕತೆ ಮತ್ತು ಗುಣಮಟ್ಟದ ಸೇವೆಯನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ.

ಸಚಿನ್ ತೆಂಡೂಲ್ಕರ್ ಅವರ ಸಹಭಾಗಿತ್ವದೊಂದಿಗೆ ನಡೆಯುತ್ತಿರುವ ಈ ಅಭಿಯಾನವು, ಕರ್ನಾಟಕದ ಗ್ರಾಹಕರಿಗೆ ಸುರಕ್ಷಿತ ಮತ್ತು ನಂಬಿಕೆಗೆ ಅರ್ಹ ಕಾರು ವಹಿವಾಟಿನ ಅನುಭವವನ್ನು ಒದಗಿಸುವತ್ತ ಮಹತ್ವದ ಹೆಜ್ಜೆಯಾಗಿದೆ.

## ಘನತ್ಯಾಜ್ಯ ಕುರಿತು ಜಾಗೃತಿ

ಮಾಲೂರು

ನಗರಸಭೆ ಹಾಗೂ ಆರೋಗ್ಯ ಶಾಖೆಯ ಸಿಬ್ಬಂದಿಯವರು ಮಾಲೂರು ಪಟ್ಟಣದ ವ್ಯಾಪ್ತಿಯಲ್ಲಿ ಬರುವ 27 ವಾರ್ಡ್‌ಗಳಲ್ಲಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮಗಳು 2026 ರನ್ನು ಅನುಷ್ಠಾನಗೊಳಿಸುವ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಸಲುವಾಗಿ ನಗರದ ವಾರ್ಡುಗಳಲ್ಲಿ ಕಾರ್ಯಾಕ್ರಮದ ವೇಳಾಪಟ್ಟಿಯನ್ನು ನಿಗದಿಪಡಿಸಿಕೊಳ್ಳಲಾಗಿದೆ.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆಯ ಹೊಸ ನಿಯಮಗಳ ಅರಿವು ಪಡೆಯುವಂತೆ ನಗರಸಭೆ ಪೌರಾಯುಕ್ತ ಎಂಎಸ್ ಮಹದೇವ್ ಹೇಳಿದರು.

ಅವರು ನಗರದ ನಗರ ಸಭೆಯ ಅವರ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮಗಳು 2026 ರನ್ನು ಅನುಷ್ಠಾನಗೊಳಿಸುವ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಸಲುವಾಗಿ ನಗರದ ವಾರ್ಡುಗಳಲ್ಲಿ ಕಾರ್ಯಕ್ರಮದ ವೇಳಾಪಟ್ಟಿಯನ್ನು ನಿಗದಿಪಡಿಸಿಕೊಳ್ಳಲಾಗಿದೆ ನಗರದ ಅಂಬೇಡ್ಕರ್ ಭವನದ ಜೂನ್ 18 ರಂದು 01, 02, ಮತ್ತು 12, ಜೂನ್ 20 ವಾರ್ಡ್ ನಂಬರ್ 03,04 ಮತ್ತು 05 ಕುಂಬೇಶ್ವರ ಕಲ್ಯಾಣ ಮಂಟಪ, ಜೂನ್ 22 ವಾರ್ಡ್ ನಂಬರ್ 06,07,08,09,10 ಮತ್ತು 11 ಕುಪಟ್ಟಶೆಟ್ಟಿ ಬಾವಿ ಬಯಲು ರಂಗಮಂದಿರ, ಜೂನ್ 24 ವಾರ್ಡ್ ನಂಬರ್ 17, 18,19,20 ಮತ್ತು 21, ಎಡಿ ಕಾಲೋನಿ ಸಮುದಾಯ ಭವನ, ಜೂನ್ 29 ವಾರ್ಡ್ ನಂಬರ್ 13,14,15 ಮತ್ತು 16, ತಿರುಮಲ ಕಲ್ಯಾಣ ಮಂಟಪ, ಜುಲೈ 01 ವಾರ್ಡ್ ನಂಬರ್ 22,23,24,25,26 ಮತ್ತು 27 ಹೆಚ್.ವಿ.ಆರ್. ಕಲ್ಯಾಣಮಂಟಪದಲ್ಲಿ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ 2026ರ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮಗಳ ಬಗ್ಗೆ ಜಾಗೃತಿ ಪಡೆಯುವಂತೆ ಹೇಳಿದ್ದಾರೆ.

# ಟರ್ಟಲ್‌ಮಿಂಟ್ ಫಿನ್‌ಟೆಕ್ ಸೊಲ್ಯೂಷನ್ಸ್ ಐಪಿಒ 19ರಿಂದ ಆರಂಭ

ಬೆಂಗಳೂರು: ಟರ್ಟಲ್‌ಮಿಂಟ್ ಫಿನ್‌ಟೆಕ್ ಸೊಲ್ಯೂಷನ್ಸ್ ಲಿಮಿಟೆಡ್ ತನ್ನ ಆರಂಭಿಕ ಸಾರ್ವಜನಿಕ ಷೇರು ಬಿಡುಗಡೆ (ಐಪಿಒ) ಪ್ರಕ್ರಿಯೆಯನ್ನು ಜೂನ್ 19ರಿಂದ ಆರಂಭಿಸಲಿದ್ದು, ಹೂಡಿಕೆದಾರರಿಗೆ ಪ್ರತಿ ಈಕ್ವಿಟಿ ಷೇರಿಗೆ ರೂ.144 ರಿಂದ ರೂ.152ರ ದರಪಟ್ಟಿ ನಿಗದಿಪಡಿಸಲಾಗಿದೆ.

ಕಂಪನಿಯು ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ, ಸಾರ್ವಜನಿಕರು ಕನಿಷ್ಠ 98 ಈಕ್ವಿಟಿ ಷೇರುಗಳಿಗೆ ಹಾಗೂ ನಂತರ 98 ಷೇರುಗಳ ಗುಣಕಗಳಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಈ ಐಪಿಒದಲ್ಲಿ ಪ್ರತಿ ಷೇರಿನ ಮುಖಬೆಲೆ ರೂ.1 ಆಗಿದ್ದು, ರೂ.6,607.22 ದಶಲಕ್ಷ (ರೂ.660.72 ಕೋಟಿ) ಮೌಲ್ಯದ ಹೊಸ ಷೇರುಗಳ ಮಾರಾಟ (ಫ್ರೆಶ್ ಇಶ್ಯೂ) ಹಾಗೂ 1,46,01,846 ಈಕ್ವಿಟಿ ಷೇರುಗಳ ಮಾರಾಟ ಕೊಡುಗೆ (ಆಫರ್ ಫಾರ್ ಸೇಲ್) ಒಳಗೊಂಡಿದೆ.

ಸಾಂಸ್ಥಿಕ ಹೂಡಿಕೆದಾರರಿಗಾಗಿ (ಆಂಕರ್ ಹೂಡಿಕೆದಾರರು) ಬಿಡ್ಡಿಂಗ್ ಪ್ರಕ್ರಿಯೆಯನ್ನು ಜೂನ್ 18ರಂದು ನಡೆಸಲಾಗುತ್ತದೆ. ಸಾರ್ವಜನಿಕ ಹೂಡಿಕೆದಾರರಿಗಾಗಿ ಐಪಿಒ ಜೂನ್ 19ರಂದು ಆರಂಭವಾಗಿ, ಜೂನ್ 23ರಂದು ಮುಕ್ತಾಯಗೊಳ್ಳಲಿದೆ.

# ಕೆ.ಹೆಚ್.ಮುನಿಯಪ್ಪರಿಗೆ ಡಿಸಿಎಂ ಸ್ಥಾನ ನೀಡಲು ಒತ್ತಾಯ

ತುಮಕೂರು

ರಾಜ್ಯದಲ್ಲಿ ಹೆಚ್ಚು ಜನಸಂಖ್ಯೆ ಇರುವ ಮಾದಿಗ ಸಮುದಾಯದ ಮುಖಂಡರಾದ ಕೆ.ಹೆಚ್.ಮುನಿಯಪ್ಪ ಅವರನ್ನು ಉಪಮುಖ್ಯಮಂತ್ರಿಯಾಗಿ ನೇಮಿಸಿ,ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯನ್ನಾಗಿ ಮಾಡುವಂತೆ ಒಳಮೀಸಲಾತಿ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ಮಾರಸಂದ್ರ ಮುನಿಯಪ್ಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಪಕ್ಷದ ಹೈಕಮಾಂಡನ್ನು ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿಂದು ಮಾತನಾಡಿದ ಅವರು,ರಾಜ್ಯದಲ್ಲಿ ಮಾದಿಗ ಸಮುದಾಯ, ಹೊಲೆಯ ಸಮುದಾಯಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದೆ.ಹೀಗಿದ್ದು, ಡಿ.ಕೆ.ಶಿವಕುಮಾರ ಸಚಿವ ಸಂಪುಟದಲ್ಲಿ ಹೊಲೆಯರಿಗೆ ಡಿ.ಸಿ.ಎಂ. ಮಾಡಿದ ಎರಡು ಸಚಿವ ಸ್ಥಾನ ನೀಡಿ,ಗೃಹ ಮತ್ತು ಕಂದಾಯದಂತಹ ಪ್ರಭಾವಿ ಖಾತೆಗಳನ್ನು ನೀಡಲಾಗಿದೆ.ಆದರೆ ಆರು ಬಾರಿ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಹಿರಿಯರಾದ ಕೆ.ಹೆಚ್.ಮುನಿಯಪ್ಪ ಅವರನ್ನು ಮಾತ್ರ ಸಚಿವರನ್ನಾಗಿಸಿ, ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ನೀಡಿ




ಅವಮಾನ ಮಾಡಲಾಗಿದೆ. ಹಾಗಾಗಿ ಕೆ.ಹೆಚ್.ಮುನಿಯಪ್ಪ ಅವರಿಗೆ ನೀಡಿರುವ ಖಾತೆಯನ್ನು ಬದಲಾಯಿಸಿ, ಅವರ ಹಿರಿತನದ ಆಧಾರದಲ್ಲಿ ಸಮಾಜ ಕಲ್ಯಾಣ ಇಲಾಖೆ ನೀಡಬೇಕು. ಹಾಗು ಅವರನ್ನು ಉಪಮುಖ್ಯಮಂತ್ರಿ ಮಾಡಬೇಕೆಂಬುದು ನಮ್ಮಗಳ ಆಗ್ರಹವಾಗಿದೆ ಎಂದರು.

ರಾಜ್ಯದಲ್ಲಿರುವ ಕಾಂಗ್ರೆಸ್ ಸರಕಾರ ಒಳಮೀಸಲಾತಿಯಲ್ಲಿ ಮಾದಿಗರಿಗೆ ತೀವ್ರ ಅನ್ಯಾಯ ಮಾಡಿದೆ.35 ವರ್ಷಗಳ ಸುಧೀರ್ಘ ಹೋರಾಟವನ್ನು ಕಡೆಗಣಿಸಿದೆ.ಪಕ್ಷದ ಪ್ರಾಣಾಳಿಕೆಯಲ್ಲಿ ಒಳಮೀಸಲಾತಿ ಜಾರಿ ಅಂಶವಿದ್ದರೂ ಸುಪ್ರಿಂಕೋರ್ಟಿನ ಆದೇಶ ಬರುವವರೆಗು ಒಳಮೀಸಲಾತಿ ವಿಚಾರವನ್ನು ನಿರ್ಲಕ್ಷ ಮಾಡುತ್ತಲೇ ಬಂದಿತ್ತು. ಅಲ್ಲದೆ ಸರಕಾರದ ಮುಂದೆ ನ್ಯಾ.ಎ.ಜೆ. ಸದಾಶಿವ ಆಯೋಗ,ಜೆ.ಸಿ.ಮಾಧುಸ್ವಾಮಿ ಉಪಸಮಿತಿಯ ವರದಿ ಇದ್ದರೂ ಅವುಗಳನ್ನು ಕೈಬಿಟ್ಟು, ನ್ಯಾ.ನಾಗಮೋಹನದಾಸ್ ಅವರ ಸಮಿತಿ ರಚಿಸಿ, ಅವರ ಶಿಫಾರಸ್ಸುಗಳನ್ನು ಕೈಬಿಟ್ಟು, ಮನಬಂದಂತೆ ಮೀಸಲಾತಿ ಹಂಚಿಕೆ ಮಾಡಿ ಮಾದಿಗರನ್ನು ವಂಚಿಸಲಾಗಿದೆ.

ಹೊಸ ಒಳಮೀಸಲಾತಿ ನೀತಿಯಲ್ಲಿಯೂ 3 ಕ್ಕಿಂತ ಕಡಿಮೆ ಹುದ್ದೆಗಳಿದ್ದಾಗ ಒಳಮೀಸಲಾತಿ ಅನ್ವಯಿಸು ವುದಿಲ್ಲ ಎಂಬ ನಿಯಮ ರೂಪಿಸಿ, ಒಳಮೀಸಲಾತಿ ಇದ್ದೂ ಇಲ್ಲದಂತೆ ಮಾಡಲಾಗಿದೆ.ಸರಕಾರ ನ್ಯಾ.ನಾಗಮೋಹನ ದಾಸ್ ವರದಿ ಅನ್ವಯ ಒಳಮೀಸಲಾತಿ ಹಂಚಿಕೆ ಮಾಡಬೇಕು.ಅಲೆಮಾರಿ ಮತ್ತು ಅರೆ ಅಲೆಮಾರಿಗಳಿಗೆ ಶೇ1ರ ಪ್ರತ್ಯೇಕ ಮೀಸಲಾತಿಯ ಜೊತೆಗೆ, ಪ್ರತ್ಯೇಕ ಅಲೆಮಾರಿ ಅಭಿವೃದ್ದಿ ನಿಗಮ ಸ್ಥಾಪಿಸಿ, ಹೆಚ್ಚಿನ ಅನುದಾನ ನೀಡಬೇಕೆಂದು ಮಾರಸಂದ್ರ ಮುನಿಯಪ್ಪ ಸರಕಾರವನ್ನು ಒತ್ತಾಯಿಸಿದರು.

ಸರಕಾರಕ್ಕೆ ಈಗಾಗಲೇ ಮಾದಿಗ ಸಮುದಾಯಕ್ಕೆ ಆಗಿರುವ ಅನ್ಯಾಯವನ್ನು ಸಂಬಂಧ ಪಟ್ಟವರ ಗಮನಕ್ಕೆ ತಂದು, ನ್ಯಾಯ ಒದಗಿಸುವಂತೆ ಕೋರಲಾಗಿದೆ. ಸರಕಾರದ ಧೋರಣೆ ಹೀಗೆಯೇ ಮುಂದುವರೆದರೆ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳ ಜೊತೆಗೆ, ಮುಂಬರುವ ಚುನಾವಣೆಗಳಲ್ಲಿ ಮಾದಿಗರು ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಮಾರಸಂದ್ರ ಮುನಿಯಪ್ಪ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಒಳಮೀಸಲಾತಿ ಹೋರಾಟ ಸಮಿತಿ ಕಾರ್ಯಾಧ್ಯಕ್ಷರಾದ ಬಸವರಾಜ ಕೌತುಕ್, ಮಾದಿಗ ದಂಡೋರದ ಪಾವಗಡ ಶ್ರೀರಾಮ್, ದಸಂಸದ ರಾಜ್ಯಾಧ್ಯಕ್ಷ ಎಂ.ಗುರುಮೂರ್ತಿ, ಒಳಮೀಸಲಾತಿ ಹೋರಾಟ ಸಮಿತಿಯ ಡಾ.ವೈ.ಕೆ.ಬಾಲಕೃಷ್ಣಪ್ಪ, ಗಂಗಾಧರ್, ಅರೆ ಅಲೆಮಾರಿ ಸಂಘಟನೆಯ ಚಾವಡಿ ಲೋಕೇಶ್ ಸೇರಿದಂತೆ ರಾಜ್ಯ ಮತ್ತು ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

## ಎಂಡ್ ಆಫ್ ಸ್ಯಾಡ್‌ನೆಸ್ ಸೇಲ್'

ಬೆಂಗಳೂರು: ಈ ಸೀಸನ್‌ನಲ್ಲಿ ಸಣ್ಣಪುಟ್ಟ ಸಂತೋಷದ ಕ್ಷಣಗಳನ್ನು ಸಂಭ್ರಮಿಸಲು ಫಿಜಾ ಬೈ ನೆಕ್ಸಸ್ ಮಾಲ್ ವಿಶಿಷ್ಟವಾದ 'ಎಂಡ್ ಆಫ್ ಸ್ಯಾಡ್‌ನೆಸ್ ಸೇಲ್' ಅನ್ನು ಪ್ರಾರಂಭಿಸಿದ್ದು, ಇದರ ಭಾಗವಾಗಲು ಮಂಗಳೂರಿನ ಜನತೆಯನ್ನು ಪ್ರೀತಿಯಿಂದ ಆಹ್ವಾನಿಸುತ್ತಿದೆ. ಇದು ಕೇವಲ ಒಂದು ಸಾಮಾನ್ಯ ಸೇಲ್ ಮಾತ್ರವಲ್ಲ; ಜನರು ಮಾಲ್‌ಗಳಿಗೆ ಬರುವುದು ಕೇವಲ ಶಾಪಿಂಗ್ ಮಾಡಲು ಮಾತ್ರವಲ್ಲ ಎಂಬ ಸರಳ ಸತ್ಯದಿಂದ ಪ್ರೇರಿತಗೊಂಡು ಈ ಅಭಿಯಾನವನ್ನು ರೂಪಿಸಲಾಗಿದೆ.

ಗ್ರಾಹಕರು ತಮ್ಮ ಜೀವನದ ಮೈಲಿಗಲ್ಲುಗಳನ್ನು ಸಂಭ್ರಮಿಸಲು, ಸ್ನೇಹಿತರನ್ನು ಭೇಟಿಯಾಗಲು, ಕುಟುಂಬದೊಂದಿಗೆ ಗುಣಮಟ್ಟದ ಸಮಯ ಕಳೆಯಲು, ನೆನಪುಗಳನ್ನು ಸೃಷ್ಟಿಸಲು, ಹೊಸ ಅನುಭವಗಳನ್ನು ಪಡೆಯಲು ಮತ್ತು ಮುಖ್ಯವಾಗಿ ತಮ್ಮ ಬೇಸರವನ್ನು ಮರೆತು ಮನಸ್ಸಿಗೆ ನೆಮ್ಮದಿ ಕಂಡುಕೊಳ್ಳಲು ಮಾಲ್‌ಗೆ ಬರುತ್ತಾರೆ.

ಕೆಲಸದ ಸ್ಥಳದಲ್ಲಿ ಕಠಿಣ ದಿನ, ರದ್ದಾದ ಪ್ಲಾನ್‌ಗಳು, ನಿರಾಶಾದಾಯಕ ಫಲಿತಾಂಶ, ಕೈತಪ್ಪಿದ ಅವಕಾಶ ಅಥವಾ ಯಾವುದೇ ಕೆಲಸಗಳು ಅಂದುಕೊಂಡಂತೆ ನಡೆಯದ ದಿನಗಳನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಎದುರಿಸಿರುತ್ತೇವೆ. ಜೀವನದಲ್ಲಿ ಬೇಸರಗೊಳ್ಳಲು ನಮಗೆ ಹಲವು ಕಾರಣಗಳಿರಬಹುದು, ಆದರೆ ಫಿಜಾ ಬೈ ನೆಕ್ಸಸ್ ಮಾಲ್‌ನಲ್ಲಿ ಅದರಿಂದ ಹೊರಬಂದು ಮತ್ತೆ ಉಲ್ಲಾಸದಿಂದ ಪುಟಿದೇಳಲು ಅಸಂಖ್ಯಾತ ಮಾರ್ಗಗಳಿವೆ. ಸ್ನೇಹಿತರೊಂದಿಗೆ ಭರ್ಜರಿ ಊಟ ಸವಿಯುವುದು, ನೆಚ್ಚಿನ ಸಿನಿಮಾ ನೋಡುವುದು, ಕುಟುಂಬದೊಂದಿಗೆ ಅಮೂಲ್ಯ ಸಮಯ ಕಳೆಯುವುದಾಗಿದೆ.

ಹೊಸದನ್ನು ಅನ್ವೇಷಿಸುವುದು ಅಥವಾ ನಿಮಗಾಗಿ ನೀವೇ ವಿಶೇಷವಾದ ಉಡುಗೊರೆಯನ್ನು ಖರೀದಿಸುವ ಮೂಲಕ ಇಲ್ಲಿ ಸಂತೋಷವನ್ನು ಕಂಡುಕೊಳ್ಳಬಹುದು.

# ವಿಐಎಸ್‌ಎಲ್ ಹೆಸರಿನಲ್ಲಿ ಸ್ವತಂತ್ರ ಉದ್ಯಮ ಆರಂಭ

ಬೆಂಗಳೂರು: ಭಾರತದ ಕೈಗಾರಿಕಾ ರಂಗದಲ್ಲಿ ದೀರ್ಘ ಇತಿಹಾಸ ಹೊಂದಿರುವ ವೇದಾಂತ ಸಮೂಹದ ಅಂಗಸಂಸ್ಥೆಯಾದ ವೇದಾಂತ ಐರನ್ ಅಂಡ್ ಸ್ಟೀಲ್ ಲಿಮಿಟೆಡ್, ದೇಶದ ಪ್ರಮುಖ ಷೇರು ಮಾರುಕಟ್ಟೆಗಳಾದ ಬಿಎಸ್‌ಇಲು ಮತ್ತು ಎನ್‌ಎಸ್‌ಇನಲ್ಲಿ ತನ್ನ ಈಕ್ವಿಟಿ ಷೇರುಗಳನ್ನು ಯಶಸ್ವಿಯಾಗಿ ಪಟ್ಟಿ ಮಾಡುವ ಮೂಲಕ ಸ್ವತಂತ್ರ ಸಾರ್ವಜನಿಕ ಕಂಪನಿಯಾಗಿ ಹೊಸ ಇತಿಹಾಸ ಬರೆದಿದೆ.

ದೇಶದ ಉಕ್ಕು ವಲಯವು ಹಿಂದೆಂದೂ ಕಾಣದ ಕ್ಷಿಪ್ರ ಬೆಳವಣಿಗೆಯ ಹಂತವನ್ನು ತಲುಪಿರುವ ಈ ಸಂದರ್ಭದಲ್ಲಿ, ಇಂಟಿಗ್ರೇಟೆಡ್ ಕಬ್ಬಿಣದ ಅದಿರು ಮತ್ತು ಉಕ್ಕು ತಯಾರಿಕಾ ರಂಗದಲ್ಲಿ ಮುಂಚೂಣಿಯಲ್ಲಿರುವ ವಿಐಎಸ್‌ಎಲ್ ಕಂಪನಿಯು ಹೂಡಿಕೆದಾರರಿಗೆ ನೇರ ಹೂಡಿಕೆಯ ಅತ್ಯುತ್ತಮ ಅವಕಾಶವನ್ನು ತಂದೊಡ್ಡಿದೆ.

ದೇಶದಲ್ಲಿ ಮೂಲಸೌಕರ್ಯ, ರೈಲ್ವೆ, ಇಂಧನ, ರಕ್ಷಣೆ ಮತ್ತು ನಗರೀಕರಣ ವಲಯದಲ್ಲಿ ಹೆಚ್ಚುತ್ತಿರುವ ಹೂಡಿಕೆಯಿಂದಾಗಿ ಪ್ರಸ್ತುತ 200 ಮಿಲಿಯನ್ ಟನ್ ಇರುವ ದೇಶದ ಉಕ್ಕು ಉತ್ಪಾದನಾ ಸಾಮರ್ಥ್ಯವು 2030ರ ವೇಳೆಗೆ 300 ಮಿಲಿಯನ್ ಟನ್ ಗೆ ಏರಿಕೆಯಾಗುವ ನಿರೀಕ್ಷೆಯಿದೆ. ದೇಶೀಯ ಉಕ್ಕಿನ ಬೇಡಿಕೆಯು ವಾರ್ಷಿಕವಾಗಿ ಶೇ. 6 ರಿಂದ ಶೇ. 8 ರಷ್ಟು ಹೆಚ್ಚುತ್ತಿದ್ದು, ಇದು ಜಾಗತಿಕ ಪ್ರಗತಿ ದರಕ್ಕಿಂತ ಅತ್ಯಂತ ವೇಗವಾಗಿದೆ. ಮುಂದಿನ ದಶಕದಲ್ಲಿ ಭಾರತದ ಆರ್ಥಿಕ ಪ್ರಗತಿಗೆ ಈ ವಲಯವೇ ದಿಕ್ಸೂಚಿಯಾಗಲಿದೆ ಎಂದು ಮಾರುಕಟ್ಟೆ ತಜ್ಞರು ಅಂದಾಜಿಸಿದ್ದಾರೆ.

# ಕ್ಲೌಡ್ ಕಾಂಟ್ಯಾಕ್ಟ್ ಸೆಂಟರ್ ಅಳವಡಿಕೆ

ಬೆಂಗಳೂರು: ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ತನ್ನ ಗ್ರಾಹಕ ಸಂಪರ್ಕ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ಕೈಗೊಂಡಿದ್ದು, ಸಾಂಪ್ರದಾಯಿಕ ಸಂಪರ್ಕ ಮೂಲಸೌಕರ್ಯದಿಂದ ಅತ್ಯಾಧುನಿಕ ಕ್ಲೌಡ್ ಆಧಾರಿತ ಕಾಂಟ್ಯಾಕ್ಟ್ ಸೆಂಟರ್ ವ್ಯವಸ್ಥೆಗೆ ಯಶಸ್ವಿಯಾಗಿ ಪರಿವರ್ತನೆಗೊಂಡಿರುವುದಾಗಿ ಘೋಷಿಸಿದೆ.

ಬ್ಯಾಂಕ್ ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ, ಈ ಹೊಸ ವ್ಯವಸ್ಥೆ ಅಳವಡಿಕೆಯ ನಂತರ ಗ್ರಾಹಕರ ಕರೆ ಕಡಿತ (ಕಾಲ್ ಡ್ರಾಪ್) ಪ್ರಮಾಣದಲ್ಲಿ ಶೇ.27ರಷ್ಟು ಇಳಿಕೆ ಕಂಡುಬಂದಿದ್ದು, ಗ್ರಾಹಕ ತೃಪ್ತಿ ಸೂಚ್ಯಂಕದಲ್ಲಿ ಶೇ.90ಕ್ಕಿಂತ ಹೆಚ್ಚಿನ ಸಾಧನೆ ದಾಖಲಿಸಲಾಗಿದೆ. ಜೊತೆಗೆ ಮಾರಾಟದ ಉತ್ಪಾದಕತೆಯಲ್ಲಿ ಶೇ.41ಕ್ಕಿಂತ ಹೆಚ್ಚು ಏರಿಕೆ ಕಂಡುಬಂದಿದೆ ಎಂದು ತಿಳಿಸಲಾಗಿದೆ.

ಡಿಜಿಟಲ್ ತಂತ್ರಜ್ಞಾನ ಮತ್ತು ನೈಜ ಸಮಯದ ಬ್ಯಾಂಕಿಂಗ್ ಸೇವೆಗಳತ್ತ ವಲಯವು ವೇಗವಾಗಿ ಸಾಗುತ್ತಿರುವ ಸಂದರ್ಭದಲ್ಲಿ, ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ತನ್ನ ಗ್ರಾಹಕ ಸೇವಾ ಕಾರ್ಯಾಚರಣೆಗಳನ್ನು ಹೆಚ್ಚು ಏಕೀಕೃತ, ದತ್ತಾಂಶ ಆಧಾರಿತ ಹಾಗೂ ವಿಸ್ತರಿಸಬಹುದಾದ ವ್ಯವಸ್ಥೆಯಾಗಿ ರೂಪಿಸಿದೆ.

ದೇಶದ ವಿವಿಧ ಭಾಗಗಳಲ್ಲಿ ಒಂದು ಕೋಟಿಗೂ ಹೆಚ್ಚು ಗ್ರಾಹಕರಿಗೆ ಸೇವೆ ನೀಡುತ್ತಿರುವ ಬ್ಯಾಂಕ್, ಹೆಚ್ಚುತ್ತಿರುವ ಗ್ರಾಹಕರ ಸಂಖ್ಯೆ ಮತ್ತು ವಹಿವಾಟಿನ ಜಟಿಲತೆಗೆ ಅನುಗುಣವಾಗಿ ತನ್ನ ಸಂಪರ್ಕ ಮೂಲಸೌಕರ್ಯವನ್ನು ಆಧುನೀಕರಿಸಿದೆ.

ಹೊಸ ಕ್ಲೌಡ್ ಆಧಾರಿತ ವೇದಿಕೆಯು ಧ್ವನಿ ಕರೆಗಳು ಸೇರಿದಂತೆ ವಿವಿಧ ಸಂಪರ್ಕ ಮಾಧ್ಯಮಗಳನ್ನು ಒಂದೇ ವ್ಯವಸ್ಥೆಯಡಿ ತರಲು ನೆರವಾಗಿದ್ದು, ಸ್ವಯಂ ಸೇವಾ ಸೌಲಭ್ಯಗಳು ಮತ್ತು ಐವಿಆರ್ ಆಧಾರಿತ ಸ್ವಯಂಚಾಲಿತ ವ್ಯವಸ್ಥೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಹಕಾರಿಯಾಗಿದೆ.

